Akashvani : Bengaluru
National Bulletin In Kannada
07.09.2025 : 19.35hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

07.09.2025 : 19.35hrs

*******

**ಮುಖ್ಯಾಂಶಗಳು**

- ಇನ್ನು ಕೆಲವೇ ಘಂಟೆಗಳಲ್ಲಿ ನಭೋಮಂಡಲದಲ್ಲಿ ಸಂಪೂರ್ಣ ಚಂದ್ರಗ್ರಹಣ; ಬರಿ ಗಣ್ಣಿನಿಂದಲೂ ವೀಕ್ಷಿಸಬಹುದಾದ ಗ್ರಹಣ ಪ್ರಕ್ರಿಯೆ
- ಇದೇ ಮಂಗಳವಾರ ಪ್ರವಾಹ ಪೀಡಿತ ಪಂಜಾಬ್‌ಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಲಿರುವ ಪ್ರಧಾನಿ ನರೇಂದ್ರ ಮೋದಿ
- ಬಿಹಾರದಲ್ಲಿ ಮುಖ್ಯಮಂತ್ರಿಯಿಂದ ಮಹಿಳಾ ರೋಜ್ಗಾರ್ ಯೋಜನೆಗೆ ಚಾಲನೆ; ಮಹಿಳಾ ಸ್ವಾವಲಂಬನೆಗೆ ಒತ್ತು.
- ದಕ್ಷಿಣ ಕೊರಿಯಾದಲ್ಲಿ ನಡೆದ ವಿಶ್ವ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್; ಭಾರತದ ಸಂಯುಕ್ತ ತಂಡಕ್ಕೆ ಚಿನ್ನದ ಪದಕ

*******

ದಶಕದ ಅತ್ಯಂತ ದೀರ್ಘವಾದ ಸಂಪೂರ್ಣ ಚಂದ್ರಗ್ರಹಣ ಇಂದು ರಾತ್ರಿ ಗೋಚರಿಸಲಿದೆ. ಈ ಗ್ರಹಣ ದೆಹಲಿ, ಮುಂಬೈ, ಕೊಲ್ಕತ್ತಾ, ಬೆಂಗಳೂರು ಸೇರಿದಂತೆ ಭಾರತದಾದ್ಯಂತ ಎಲ್ಲ ಪ್ರಮುಖ ನಗರಗಳಲ್ಲಿ ಸ್ಪಷ್ಟವಾಗಿ ಕಾಣಿಸಲಿದೆ. ಜೊತೆಗೆ ಏಷ್ಯಾ, ಆಸ್ಟ್ರೇಲಿಯಾ, ಪೂರ್ವ ಆಫ್ರಿಕಾ ಮತ್ತು ಯುರೋಪಿನ ಕೆಲವು ಭಾಗಗಳಲ್ಲಿಯೂ ಗೋಚರವಾಗಲಿದೆ.ಅಪರೂಪದ ಈ ಬಾರಿಯ ಚಂದ್ರಗ್ರಹಣವನ್ನು ಬರಿಗಣ್ಣಿನಿಂದ ಸುಲಭವಾಗಿ ವೀಕ್ಷಿಸಬಹುದಾಗಿದೆ. ಚಂದ್ರ ಮತ್ತು ಸೂರ್ಯನ ನಡುವೆ ಭೂಮಿ ಬಂದಾಗ ನಡೆಯುವ ಈ ನೆರಳಿನ ಆಟವನ್ನು ಎಲ್ಲರೂ ಕಣ್ತುಂಬಿಕೊಳ್ಳಬಹುದಾಗಿದೆ. ಇಂದು ರಾತ್ರಿ ೮.೫೮ ರಿಂದ ಗ್ರಹಣ ಪ್ರಕ್ರಿಯೆ ಆರಂಭವಾಗಲಿದೆ.

೧೧ ಗಂಟೆ ೧ ನಿಮಿಷದಿಂದ ೧೨ ಗಂಟೆ ೩೩ ನಿಮಿಷದ ಅವಧಿಯಲ್ಲಿ ಸಂಪೂರ್ಣ ಚಂದ್ರಗ್ರಹಣ ಸಂಭವಿಸಲಿದೆ. ನಾಳೆ ಬೆಳಗಿನ ಜಾವ ೨ ಗಂಟೆ ೨೫ ನಿಮಿಷಕ್ಕೆ ಗ್ರಹಣ ಮುಕ್ತಾಯವಾಗಲಿದೆ.

*******

ಪ್ರಧಾನಿ ನರೇಂದ್ರ ಮೋದಿ ಇದೇ ಮಂಗಳವಾರ ಪ್ರವಾಹ ಪೀಡಿತ ಪಂಜಾಬ್‌ಗೆ ಭೇಟಿ ನೀಡಿ ರಾಜ್ಯದ ಪರಿಸ್ಥಿತಿಯನ್ನು ಅವಲೋಕಿಸಲಿದ್ದಾರೆ. ನಂತರ, ವಿಪತ್ತು ಪೀಡಿತ ಹಿಮಾಚಲ ಪ್ರದೇಶಕ್ಕೆ ತೆರಳಿ ಪರಿಶೀಲಿಸಲಿದ್ದಾರೆ ಮತ್ತು ಅವಲೋಕಿಸಲಿದ್ದಾರೆ. ಭೇಟಿಗೆ ಬಗ್ಗೆ ಪ್ರತಿಕ್ರಿಯಿಸಿದ ಪಂಜಾಬ್ ರಾಜ್ಯ ಬಿಜೆಪಿ ಮುಖ್ಯಸ್ಥ ಸುನಿಲ್ ಜಾಖರ್, ಪ್ರಧಾನಿ ನರೇಂದ್ರ ಮೋದಿ "ಪಂಜಾಬ್‌ನಲ್ಲಿನ ಪ್ರವಾಹ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ ಮತ್ತು ಅದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ" ಎಂದು ಹೇಳಿದರು. "ಸ್ಥಳೀಯ ಪರಿಸ್ಥಿತಿಗಳನ್ನು ವೈಯಕ್ತಿಕವಾಗಿ ನಿರ್ಣಯಿಸಲು ಮತ್ತು ಪಂಜಾಬ್ ಜನರಿಗೆ ಗರಿಷ್ಠ ಸಹಾಯವನ್ನು ಒದಗಿಸಲು ಪ್ರವಾಹ ಪರಿಸ್ಥಿಯ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಲು ಪ್ರಧಾನಿ ಮಂಗಳವಾರ ಪಂಜಾಬ್‌ಗೆ ಭೇಟಿ ನೀಡಲಿದ್ದಾರೆ. ಇದಕ್ಕೂ ಮೊದಲು, ಕೇಂದ್ರ ಕೃಷಿ ಸಚಿವ ಶಿವರಾಜ್ ಚೌಹಾಣ್ ನೆರೆ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡಲಿದ್ದಾರೆ. "ಪಂಜಾಬ್‌ನಲ್ಲಿ ಪ್ರವಾಹದಿಂದ ಉಂಟಾದ ಹಾನಿಯನ್ನು ನಿರ್ಣಯಿಸಲು ಭೇಟಿ ನೀಡಿದ ಕೇಂದ್ರ ಸರ್ಕಾರದ ಎರಡು ತಂಡಗಳು, ತಮ್ಮ ಪ್ರವಾಸದ ನಂತರ ಕೇಂದ್ರ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಲಿವೆ. ಭಾರತ ಸರ್ಕಾರ ಪಂಜಾಬ್ ಜನರೊಂದಿಗೆ ದೃಢವಾಗಿ ನಿಂತಿದೆ" ಎಂದು ಸುನಿಲ್ ಜಾಖರ್ ತಿಳಿಸಿದ್ದಾರೆ. ಮಂಗಳವಾರ ದೆಹಲಿಯಲ್ಲಿ ನಡೆಯುವ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಮಧ್ಯಾಹ್ನ ಅಮೃತಸರಕ್ಕೆ ತೆರಳುವ ಸಾಧ್ಯತೆಯಿದೆ ಅಲ್ಲಿ ಅವರು ರಾಜ್ಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸುವ ನಿರೀಕ್ಷೆಯಿದೆ.

*******

ಪ್ರವಾಹಪೀಡಿತ ಪಂಜಾಬ್, ಜಮ್ಮು ಮತ್ತು ಕಾಶ್ಮೀರ ಮತ್ತು ಹಿಮಾಚಲ ಪ್ರದೇಶದಲ್ಲಿ ಪರಿಹಾರ ಕಾರ್ಯಾಚರಣೆಗಳು ಮುಂದುವರೆದಿವೆ. ಭಾರತೀಯ ವಾಯುಪಡೆಯು ೫೪೧ ಜನರನ್ನು ರಕ್ಷಿಸಿದೆ ಮತ್ತು ೧೦ ಟನ್‌ಗೂ ಹೆಚ್ಚು ಅಗತ್ಯ ಪರಿಹಾರ ಸಾಮಗ್ರಿಗಳನ್ನು ವಿಮಾನದ ಮೂಲಕ ಸಾಗಿಸಿದೆ.

ಭಾರತೀಯ ವಾಯುಪಡೆ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಪಶ್ಚಿಮ ವಾಯು

ಕಮಾಂಡ್, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳು ಪಂಜಾಬ್, ಹಿಮಾಚಲ ಮತ್ತು ಜಮ್ಮು ಮತ್ತು ಕಾಶ್ಮೀರದಾದ್ಯಂತ ಪರಿಹಾರ ಕಾರ್ಯಾಚರಣೆಗಳನ್ನು ಒದಗಿಸುವುದನ್ನು ಮುಂದುವರೆಸಿವೆ ಎಂದು ತಿಳಿಸಿದೆ.

*******

ಬಿಹಾರದಲ್ಲಿ, ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಗುರಿಯನ್ನು ಹೊಂದಿರುವ ನೂತನ ಯೋಜನೆಯಾದ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯನ್ನು ಉದ್ಘಾಟಿಸಿದರು. ಈ ಯೋಜನೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಹಲವಾರು ಪ್ರಚಾರ ವ್ಯಾನ್‌ಗಳಿಗೆ ಚಾಲನೆ ನೀಡಿದರು ಮತ್ತು ಪೋರ್ಟಲ್ ಸಹ ಉದ್ಘಾಟಿಸಿದರು. ಈ ಯೋಜನೆಯಡಿಯಲ್ಲಿ, ರಾಜ್ಯದ ಪ್ರತಿ ಕುಟುಂಬದಿಂದ ಒಬ್ಬ ಮಹಿಳೆಗೆ ತನ್ನ ಆಯ್ಕೆಯ ವ್ಯವಹಾರವನ್ನು ಪ್ರಾರಂಭಿಸಲು ಆರ್ಥಿಕ ನೆರವು ನೀಡಲಾಗುವುದು. ಆರ್ಥಿಕ ನೆರವಿನ ಮೊದಲ ಕಂತಾಗಿ, ಆಯ್ಕೆಯಾದ ಪ್ರತಿ ಮಹಿಳೆಗೆ ಡಿಬಿಟಿ ಮೂಲಕ ಹತ್ತು ಸಾವಿರ ರೂಪಾಯಿಗಳನ್ನು ಪಡೆಯುತ್ತಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯು ಈ ಯೋಜನೆಗೆ ನೋಡಲ್ ಏಜೆನ್ಸಿಯಾಗಿರುತ್ತದೆ ಮತ್ತು ಬಿಹಾರ ಗ್ರಾಮೀಣ ಜೀವನೋಪಾಯ ಪ್ರಚಾರ ಸಂಘ, ಜೀವಿಕಾ ಇದನ್ನು ಕಾರ್ಯಗತಗೊಳಿಸುತ್ತದೆ. ಮುಂದಿನ ಹಂತದಲ್ಲಿ, ಉದ್ಯೋಗ ಪ್ರಾರಂಭವಾದ ಆರು ತಿಂಗಳ ನಂತರ ಮೌಲ್ಯಮಾಪನವನ್ನು ಕೈಗೊಳ್ಳಲಾಗುತ್ತದೆ ಮತ್ತು ಅಗತ್ಯವಿದ್ದರೆ, ಆಯ್ಕೆಯಾದ ಮಹಿಳಾ ಫಲಾನುಭವಿಗೆ ಎರಡು ಲಕ್ಷ ರೂಪಾಯಿಗಳವರೆಗೆ ಹೆಚ್ಚುವರಿ ಬೆಂಬಲವನ್ನು ಒದಗಿಸಲಾಗುತ್ತದೆ. ಈ ಯೋಜನೆಯ ಭಾಗವಾಗಿ, ಮಹಿಳೆಯರು ತಯಾರಿಸಿದ ಉತ್ಪನ್ನಗಳ ಮಾರಾಟಕ್ಕಾಗಿ ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ಸ್ಥಳೀಯ ಮಾರುಕಟ್ಟೆಗಳು ಅಥವಾ ಹಾತ್ ಬಜಾರ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

*******

ನಾರಾಯಣ ಗುರುಗಳ ಜನ್ಮ ದಿನಾಚರಣೆ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ನಾರಾಯಣ ಗುರುಗಳ ದೃಷ್ಟಿಕೋನ ಮತ್ತು ಸಮಾಜದ ಮೇಲಿನ ಪ್ರಭಾವವನ್ನು ಸ್ಮರಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಅವರು ನಾರಾಯಣ ಗುರುಗಳ ಸಮಾನತೆ, ಕರುಣೆ ಮತ್ತು ಸಹೋದರತ್ವದ ಬೋಧನೆಗಳು ವ್ಯಾಪಕವಾಗಿ ಪ್ರತಿಧ್ವನಿಸುತ್ತವೆ ಎಂದಿದ್ದಾರೆ. ಹೇಳಿದರು.

ಸಾಮಾಜಿಕ ಸುಧಾರಣೆ ಮತ್ತು ಶಿಕ್ಷಣವನ್ನು ಮುಂದುವರೆಸುವ ನಾರಾಯಣ ಗುರುಗಳ ಕರೆ ಎಂದೆಂದಿಗೂ ಸ್ಫೂರ್ತಿ ನೀಡುತ್ತಲೇ ಇದೆ ಎಂದು ಹೇಳಿದ್ದಾರೆ.

*******

ಜಿಎಸ್‌ಟಿ ಮಂಡಳಿಯು ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ಶೇಕಡ ೫, ಶೇಕಡ ೧೨, ೧೮ ಮತ್ತು ಶೇಕಡ ೨೮ರ ನಾಲ್ಕು ಹಂತದ ರಚನೆಯಿಂದ ಶೇಕಡ ೫ ಮತ್ತು ಶೇಕಡಾ ೧೮ ರ ಎರಡು ಹಂತದ ರಚನೆಯಾಗಿ ಸರಳೀಕರಿಸಿದೆ. ಈ ಸುಧಾರಣೆಗಳು ನಾಗರಿಕರ ಜೀವನವನ್ನು ಸುಲಭಗೊಳಿಸುವ ಮೂಲಕ ಅನೇಕ ವಲಯಗಳಲ್ಲಿ ತೆರಿಗೆ ದರಗಳನ್ನು ಕಡಿಮೆ ಮಾಡಿವೆ. ಜಿಎಸ್‌ಟಿ ಸುಧಾರಣೆಗಳನ್ನು ಸಾಮಾನ್ಯ ಜನರ ಮೇಲೆ ಕೇಂದ್ರೀಕರಿಸಿ ಕೈಗೊಳ್ಳಲಾಗಿದೆ ಮತ್ತು ಇಂದು ಈ ತಿಂಗಳ ೨೨ ರಿಂದ ಜಾರಿಗೆ ಬರಲಿದೆ. ಬುಧವಾರ ನಡೆದ ಸಭೆಯಲ್ಲಿ ಜಿಎಸ್‌ಟಿ ಕೌನ್ಸಿಲ್ ತನ್ನ ಸಂಕೀರ್ಣ ತೆರಿಗೆ ವ್ಯವಸ್ಥೆಯನ್ನು ಶೇಕಡಾ ೫ ಮತ್ತು ೧೮ ರ ಎರಡು ಸ್ಲ್ಯಾಬ್‌ಗಳಾಗಿ ಏಕೀಕರಿಸುವುದಾಗಿ ಘೋಷಿಸಿತು ಮತ್ತು ಸೆಸ್ ವ್ಯವಸ್ಥೆಯನ್ನು ತೆಗೆದುಹಾಕಿತು. ಜಿಎಸ್‌ಟಿಯನ್ನು ಕೇವಲ ಐದು ಪ್ರತಿಶತಕ್ಕೆ ಇಳಿಸುವುದರೊಂದಿಗೆ, ಮಾರಾಟಗಾರರು ಈಗ ಪ್ರತಿ ಸಾಗಣೆಗೆ ಕಡಿಮೆ ಖರ್ಚು ಮಾಡುತ್ತಾರೆ. ಇದು ಎಂಎಸ್‌ಎಂಇಗಳು ಮತ್ತು ಆಹಾರ ಸಂಸ್ಕರಣಾ ಘಟಕಗಳಿಗೆ ವಿಶೇಷವಾಗಿ ಸಹಾಯಕವಾಗಿದೆ. ಏತನ್ಮಧ್ಯೆ, ಭಾರತದ ಪೂರೈಕೆ ಸರಪಳಿಯ ಬೆನ್ನೆಲುಬಾಗಿರುವ ಟ್ರಕ್‌ಗಳು ಮತ್ತು ವಿತರಣಾ ವ್ಯಾನ್‌ಗಳು ದೇಶದ ಸುಮಾರು ಎಪ್ಪತ್ತು ಪ್ರತಿಶತದಷ್ಟು ಸರಕುಗಳನ್ನು ಸಾಗಿಸುತ್ತವೆ, ಇದು ಈಗ ಇಪ್ಪತ್ತೆಂಟು ಪ್ರತಿಶತದ ಬದಲು ಹದಿನೆಂಟು ಪ್ರತಿಶತ ಜಿಎಸ್‌ಟಿ ಅಡಿಯಲ್ಲಿದೆ. ವಿಲಾಯತ್ ಇಂಡಸ್ಟ್ರೀಸ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಹರೀಶ್ ಜೋಶಿ, ಹೊಸ ಜಿಎಸ್‌ಟಿ ರಚನೆಯನ್ನು ಎಂಎಸ್‌ಎಂಇ ವಲಯದ ದೃಷ್ಟಿಕೋನದಿಂದ ಪ್ರಮುಖ ಸುಧಾರಣಾ ಉಪಕ್ರಮ ಎಂದು ಶ್ಲಾಘಿಸಿದರು. ಇದು ಬೇಡಿಕೆಯನ್ನು ಉತ್ತೇಜಿಸುತ್ತದೆ ಮತ್ತು ಬಳಕೆಯನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದರು.

ಧ್ವನಿ : ಹರೀಶ್ ಜೋಶಿ

*******

ವಿಶ್ವ ವ್ಯಾಪಾರ ಸಂಸ್ಥೆ ಜೊತೆ ಮುಕ್ತ, ನ್ಯಾಯಯುತ ಮತ್ತು ಅಂತರ್ಗತ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಗೆ ಭಾರತ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ನಿನ್ನೆ ವ್ಲಾಡಿವೋಸ್ಟಾಕ್‌ನಲ್ಲಿ ನಡೆದ

ಶಾಂಘೈ ಸಹಕಾರ ಸಂಸ್ಥೆ ವ್ಯಾಪಾರ ಸಚಿವರ ಸಭೆಯಲ್ಲಿ, ಹಂಚಿಕೆಯ ಸಮೃದ್ಧಿಗಾಗಿ ಶಾಂಘೈ ಸಹಕಾರ ಸಂಸ್ಥೆಯ ಸಾಮೂಹಿಕ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ವ್ಯಾಪ್ತಿಯನ್ನು ಭಾರತ ಒತ್ತಿಹೇಳಿತು. ರಫ್ತು ವೈವಿಧ್ಯೀಕರಣ, ಅವಲಂಬನೆಯನ್ನು ಕಡಿಮೆ ಮಾಡುವುದು ಮತ್ತು ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳನ್ನು ನಿರ್ಮಿಸುವ ಅಗತ್ಯವನ್ನು ದೇಶವು ಪ್ರತಿಬಿಂಬಿಸಲಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

*******

೮೨ನೇ ವೆನಿಸ್ ಚಲನಚಿತ್ರೋತ್ಸವದಲ್ಲಿ ಚೊಚ್ಚಲ ಚಲನಚಿತ್ರ ನಿರ್ಮಾಪಕಿ ಅನುಪರ್ಣ ರಾಯ್ ಅವರು 'ಸಾಂಗ್ಸ್ ಆಫ್ ಫಾರ್ಗಾಟನ್ ಟ್ರೀಸ್' ಚಲನಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕಿಗಾಗಿ ಒರಿಝೋಂಟಿ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಈ ಚಿತ್ರವನ್ನು ಅನುರಾಗ್ ಕಶ್ಯಪ್ ಅವರು ಉತ್ಸವದಲ್ಲಿ ಪ್ರಸ್ತುತಪಡಿಸಿದರು. 'ಸಾಂಗ್ಸ್ ಆಫ್ ಫಾರ್ಗಾಟನ್ ಟ್ರೀಸ್' ಈ ಚಿತ್ರದಲ್ಲಿ ನಾಜ್ ಶೇಖ್ ಮತ್ತು ಸುಮಿ ಬಾಘೇಲ್ ನಟಿಸಿದ್ದಾರೆ ಇದನ್ನು ಬಿಭಾನ್ಶು ರಾಯ್, ರೋಮಿಲ್ ಮೋದಿ ಮತ್ತು ರಂಜನ್ ಸಿಂಗ್ ನಿರ್ಮಿಸಿದ್ದಾರೆ.

*******

ದಕ್ಷಿಣ ಕೊರಿಯಾದ ಗ್ವಾಂಗ್ಜುನಲ್ಲಿ ನಡೆದ ವಿಶ್ವ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪುರುಷರ ಸಂಯುಕ್ತ ತಂಡವು ಇಂದು ತನ್ನ ಮೊದಲ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿತು ಹಾಗೂ ಫೈನಲ್‌ನಲ್ಲಿ ಫ್ರಾನ್ಸ್ ಅನ್ನು ಸೋಲಿಸಿತು. ಇದಕ್ಕೂ ಮೊದಲು, ಜ್ಯೋತಿ ಸುರೇಖಾ ವೆನ್ನಮ್ ಮತ್ತು ರಿಷಭ್ ಯಾದವ್ ಅವರ ಮಿಶ್ರ ತಂಡವು ನೆದರ್‌ಲ್ಯಾಂಡ್ಸ್ ವಿರುದ್ಧ ಸೋತ ನಂತರ ಬೆಳ್ಳಿಗೆ ತೃಪ್ತಿಪಟ್ಟಿತು.

***END***